# ಅಪರಾಧ ಕಾನೂನು ಸುಧಾರಣೆಗಳ ಜಾಗೃತಿ ಯೋಜನೆ (ಸಿಎಲ್ಆರ್ಎಪಿ)

(ಈ ಪುಟವನ್ನು ಕೊನೆಯದಾಗಿ ಆಗಸ್ಟ್ 6, 2020 ರಂದು ಬೆಳಿಗ್ಗೆ 12:30 ಕ್ಕೆ ಐಎಸ್‌ಟಿ ಯಂತೆ ನವೀಕರಿಸಲಾಗಿದೆ. ಯಾವುದೇ ನಿರ್ಬಂಧಗಳಿಲ್ಲದೆ ತಾವು ಈ ಮಾಹಿತಿಯನ್ನು ನಕಲಿಸಲು, ಪುನರಾರ್ವತಿಸಲು ಮತ್ತು ಪ್ರಸಾರ ಮಾಡಲು ಸ್ವತಂತ್ರರಾಗಿರುವಿರಿ.).

ಗೃಹ ವ್ಯವಹಾರಗಳ ಸಚಿವಾಲಯವು ರಚಿಸಿರುವ ಅಪರಾಧ ಕಾನೂನುಗಳಲ್ಲಿನ ಸುಧಾರಣೆಗಳ ಸಮಿತಿಯ **ವ್ಯಾಖ್ಯಾನವನ್ನು ಕ್ರೋಢೀಕರಿಸುವುದು ಮತ್ತು ಪ್ರಸಾರ ಮಾಡುವುದು ಈ ವೆಬ್‌ಸೈಟ್‌ನ ಉದ್ದೇಶವಾಗಿದೆ.** ಆದರೆ, ಸಮಿತಿಯ ಮೂಲೋದ್ದೇಶವು ಸ್ಪಷ್ಟವಾಗಿರುವುದಿಲ್ಲವಾದರೂ, ಭಾರತದಲ್ಲಿ ಅಪರಾಧ ಕಾನೂನಿನಲ್ಲಿ ದೂರಗಾಮಿ ಬದಲಾವಣೆಗಳನ್ನು ಶಿಫಾರಸ್ಸು ಮಾಡುವ ಗುರಿ ಹೊಂದಿದೆ ಎಂಬುದು ನಿಚ್ಚಳವಾಗಿದೆ. ಅಪರಾಧ ಸಂತ್ರಸ್ತರಾಗಿರಲಿ ಅಥವಾ ಆರೋಪಿಯಾಗಲಿ ಅಥವಾ ನ್ಯಾಯಯುತ ಮತ್ತು ಶಾಂತಿಯುತ ಸಮಾಜದಲ್ಲಿ ಬದುಕಲು ಬಯಸುವ ಸಮಾನ್ಯ ವ್ಯಕ್ತಿಯಾಗಿರಲಿ, ಅಪರಾಧ ಕಾನೂನಿಗೆ ಒಳಪಟ್ಟಿರುವ ಪ್ರತಿಯೊಬ್ಬ ವ್ಯಕ್ತಿಗೂ ಇದು ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತದೆ. ಇದಲ್ಲದೆ, ಅಪರಾಧ ನ್ಯಾಯ ವ್ಯವಸ್ಥೆಯು ಜನರ ಮೇಲೆ ವಿಭಿನ್ನವಾಗಿ ಪರಿಣಾಮ ಬೀರುತ್ತದೆ. ಧಾರ್ಮಿಕ ಅಲ್ಪಸಂಖ್ಯಾತರು, ಹಾಗೆಯೇ ಬಡವರು, ದಲಿತರು ಮತ್ತು ಆದಿವಾಸಿ ಸಮುದಾಯಗಳು ಪೊಲೀಸ್ ಹಿಂಸಾಚಾರ, ದೀರ್ಘಾವಧಿಯ ವಿಚಾರಣಾಧೀನ ಬಂಧನ, ಕಠಿಣ ಶಿಕ್ಷೆ ಮತ್ತು ಕಾನೂನು ಬದ್ಧ ಪ್ರಾತಿನಿಧ್ಯದ ಕೊರತೆಯಿಂದಾಗಿ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿನ ಅಡ್ಡ ಪರಿಣಾಮಗಳ ಭಾರವನ್ನು ಭರಿಸುತ್ತಾರೆ. ಮಹಿಳೆಯರು, ತೃತೀಯಲಿಂಗಿಗಳು ಮತ್ತು ಲೈಂಗಿಕ ಅಲ್ಪಸಂಖ್ಯಾತರು ಇವರುಗಳು ಲಿಂಗಾಧರಿತ ದೌರ್ಜನ್ಯವನ್ನು ಅತಿಯಾಗಿ ಅನುಭವಿಸುವವರಾಗಿದ್ದು, ಅಪರಾಧ ನ್ಯಾಯ ವ್ಯವಸ್ಥೆಯ ಸೌಲಭ್ಯವನ್ನು ಪಡೆಯಲು ಕಡೆಗಣಿಸಲಾಗುತ್ತಿದೆ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಮತ್ತು ವಿಶೇಷವಾಗಿ ನಮ್ಮ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಪರಾಧ ಕಾನೂನಿನ ಸುಧಾರಣೆಗಳ ವ್ಯವಸ್ಥೆಯ ಪರಿಣಾಮವನ್ನು ಗಮನಿಸಿದರೆ,ಈ ಸುಧಾರಣೆಗಳ ಬಗ್ಗೆ ಸರಿಯಾಗಿ ಅರ್ಥಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಈ ವೆಬ್‌ಸೈಟ್ ಪ್ರಸ್ತುತ ಕೈಗೊಳ್ಳುತ್ತಿರುವ ಸುಧಾರಣಾ ಪ್ರಕ್ರಿಯೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

ಈ ಪುಟದಲ್ಲಿ, ಸಮಿತಿಯ ಸಂಯೋಜನೆ ಮತ್ತು ಕಾರ್ಯಾಚರಣೆಯ ಮುಖ್ಯ ಆಕ್ಷೇಪಣೆಯನ್ನು ನಾವು ಸಂಕ್ಷಿಪ್ತವಾಗಿ ಹೇಳುತ್ತೇವೆ. ಮುಖ್ಯವಾಗಿ ಸಮಿತಿಯ ಪ್ರತಿನಿಧಿ-ರಹಿತ ಸಂಯೋಜನೆ, ಅದರ ಹೊರಗಿಡುವ ವಿಧಾನಗಳು, ಅದರ ಕಾರ್ಯಚಟುವಟಿಕೆಯ ಅಪಾರದರ್ಶಕತೆ, ಕೇಳಿದ ಪ್ರಶ್ನೆಗಳ ವಿನ್ಯಾಸ ಮತ್ತು ಅದರ ಕೆಲಸವನ್ನು ಪೂರ್ಣಗೊಳಿಸಲು ನಿಗದಿತ ಸಂಕುಚಿತ ಸಮಯಸೂಚಿಗಳ ಕುರಿತಾಗಿ ಕಾಳಜಿಗಳು ಇವುಗಳಿಗೆ ಸಂಬಂಧಿಸಿವೆ. ನಮ್ಮ ಕಾಳಜಿಗಳಿಗೆ ಕಾನೂನು ತರಬೇತಿ/ತಿಳುವಳಿಕೆ ಇದೆಯೋ ಇಲ್ಲವೋ ಎಂಬುದನ್ನು ಲೆಕ್ಕಿಸದೆ ಎಲ್ಲರಿಗೂ ಪ್ರವೇಶಿಸಬಹುದಾದ ರೀತಿಯಲ್ಲಿ ಚರ್ಚಿಸಲು ನಾವು ಪ್ರಯತ್ನಿಸಿದ್ದೇವೆ. **ಈ ಸಮಿತಿಯ ಕಾರ್ಯಚರಣೆಯು ಸಾರ್ವಜನಿಕ ಹಿತಾಸಕ್ತಿ ವಿಷಯವಾಗಿದೆ ಎಂದು ಬಲಪಡಿಸುವುದು ನಮ್ಮ ಉದ್ದೇಶ, ಇದರ ಬಗ್ಗೆ ನಾವೆಲ್ಲರೂ ಕಾಳಜಿ ವಹಿಸಬೇಕು.**

ಸಮಿತಿಯ ಘೋಷಿತ ಗುರಿ ಸಾಂವಿಧಾನಿಕ ಮೌಲ್ಯಗಳಿಗೆ ಆದ್ಯತೆ ನೀಡುವ ಸುಧಾರಣೆಯನ್ನು ಮತ್ತು ವ್ಯಕ್ತಿಗಳು, ಸಮುದಾಯಗಳು ಮತ್ತು ರಾಷ್ಟ್ರದ ಸುರಕ್ಷತೆ ಮತ್ತು ಭದ್ರತೆಯನ್ನು ಸೂಚಿಸುತ್ತದೆ, ಆದರೆ ಇದು ಅತ್ಯಂತ ಸಂಕಷ್ಟದ ಸಮಯದಲ್ಲಿ ಬರುತ್ತದೆ. ಜಾಗತಿಕ ಕೋವಿಡ್–19 ಸಾಂಕ್ರಾಮಿಕ ರೋಗದಿಂದ ದೇಶದ ಜನರು ಬಳಲುತ್ತಿದ್ದಾರೆ, ಈ ಅವಧಿಯಲ್ಲಿ ಸರ್ಕಾರವು ನಾಗರಿಕರ; ಕಾರ್ಮಿಕರ, ಪರಿಸರ ಮತ್ತು ಭೂ ಹಕ್ಕುಗಳ ಮೇಲೆ ಪರಿಣಾಮ ಬೀರುವ ದೂರದೃಷ್ಟಿಯ 'ಸುಧಾರಣೆಗಳನ್ನು' ಪ್ರಸ್ತಾಪಿಸಿದೆ. ಸರ್ಕಾರವು ಆಯ್ದ ಕಠಿಣ ಅಪರಾಧ ಕಾನೂನುಗಳನ್ನು (ರಾಷ್ಟ್ರೀಯ ಭದ್ರತಾ ಕಾಯ್ದೆ 1980 (ಎನ್ಎಸ್ಎ) ಮತ್ತು ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ 1967 (ಯುಎಪಿಎ) ವಿದ್ಯಾರ್ಥಿಗಳು, ಅಲ್ಪಸಂಖ್ಯಾತರು,ಚಳುವಳಿಗಾರರು ಮತ್ತು ಶಿಕ್ಷಣ ತಜ್ಞರ ವಿರುದ್ಧ ಬಳಸುತ್ತಿದೆ. ಈ ಹಿನ್ನೆಲೆಯಲ್ಲಿ, ಅಪರಾಧ ಕಾನೂನಿನ ವಿವಿಧ ಅಂಶಗಳನ್ನು ಗರಿಷ್ಠ ಪಾರದರ್ಶಕತೆ ಮತ್ತು ಹೊಣೆಗಾರಿಕೆಯೊಂದಿಗೆ ಸುಧಾರಿಸಲು, ನ್ಯಾಯ ಮತ್ತು ನ್ಯಾಯದ ಮೌಲ್ಯಗಳನ್ನು ಎತ್ತಿಹಿಡಿಯಲು ವ್ಯಾಪಕವಾದ ಆದೇಶವನ್ನು ಹೊಂದಿರುವ ಸಮಿತಿಯು ಬಹಳ ಮುಖ್ಯವಾಗಿದೆ. ಅಪರಾಧ ಕಾನೂನುಗಳ ವಿವಿಧ ಅಂಶಗಳಿಗೆ ಸುಧಾರಣೆ ಅಗತ್ಯವಿದ್ದರೂ, ಈ ಸಮಿತಿಯೊಂದಿಗಿನ ಈ ಕೆಳಗಿನ ಸಮಸ್ಯೆಗಳು ಸಮಿತಿಯ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸಲು ತೊಡಕು ಉಂಟುಮಾಡಬಹುದಾಗಿದೆ.

## 1. ಅಪಾರದರ್ಶಕತೆ:

ಎ. ಸಮಿತಿಯ ಉಲ್ಲೇಖಿತ ನಿಯಮಗಳನ್ನು ರಚಿಸಿದಾಗಿನಿಂದ ಬಹಿರಂಗಪಡಿಸಲಾಗಿಲ್ಲ. ಇವು ಸಮಿತಿಯ ಕೆಲಸ ಮತ್ತು ಶಿಫಾರಸ್ಸುಗಳ ಚೌಕಟ್ಟನ್ನು ಸ್ಥಾಪಿಸುತ್ತವೆ ಮತ್ತು ಈ ಸಮಿತಿಯು ಏನು ಅರ್ಹತೆ ಹೊಂದಿದೆ/ಹೊಂದಿಲ್ಲ ಎಂಬುದನ್ನು ಅರ್ಥೈಸಲು ಅಗತ್ಯವಾಗಿರುತ್ತದೆ.

ಬಿ. ಸಮಾಲೋಚನೆಯ ಪ್ರಕ್ರಿಯೆಯಲ್ಲಿ ಅದು ಪಡೆಯುವ ಎಲ್ಲಾ ಪ್ರತಿಕ್ರಿಯೆಗಳನ್ನು ಪ್ರಕಟಿಸಲು ಸಮಿತಿ ಕ್ರಮ ಕೈಗೊಂಡಿಲ್ಲ. ಈ ಕ್ರಿಯೆಯು ಸಮಿತಿಯ ಅಂತಿಮ ವರದಿಯಲ್ಲಿ ತಪ್ಪಾಗಿ ಉಲ್ಲೇಖಿಸುವುದು ಮತ್ತು ಅಸ್ಪಷ್ಟತೆಯನ್ನು ತಡೆಯಲು ಮುಖ್ಯವಾಗಿದೆ.

## 2. ಸಮಯಸೂಚಿಗಳು:

ಎ. ಕೋವಿಡ್–19 ಜಾಗತಿಕ ಸಾಂಕ್ರಾಮಿಕದ ಮಧ್ಯದಲ್ಲಿ ಈ ಸಮಿತಿಯನ್ನು ಸ್ಥಾಪಿಸಲಾಗಿದೆ. ಪ್ರಸ್ತುತ ಸಮಯದಲ್ಲಿ, ವಿಶ್ವದ ಬೇರೆ ಯಾವುದೇ ದೇಶಗಳು (ಯುಎಸ್ಎ ಮತ್ತು ಬ್ರೆಜಿಲ್ ಅನ್ನು ಹೊರತುಪಡಿಸಿ) ಭಾರತಕ್ಕಿಂತ ಕೊರೋನ ವೈರಸ್ ಪ್ರಕರಣಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಸಾರ್ವಜನಿಕ ಆರೋಗ್ಯ ಮೂಲಸೌಕರ್ಯಗಳ ಮೇಲೆ ಭಾರಿ ಒತ್ತಡ ಮತ್ತು ನಿರುದ್ಯೋಗದ ಅಧಿಕ ಪ್ರಮಾಣಗಳು ಸೇರಿದಂತೆ ಈ ಪರಿಸ್ಥಿತಿಯ ಅನೇಕ ಋಣಾತ್ಮಕ ಪರಿಣಾಮಗಳ ಮೂಲಕ ಭಾರತೀಯ ನಾಗರೀಕರು ಬದುಕಲು ಪ್ರಯತ್ನಿಸುತ್ತಿದ್ದಾರೆ. ಈ ಸಮಯದಲ್ಲಿ ಭಾಗಿದಾರರು ಆಳವಾದ, ಸಕ್ರಿಯ ಭಾಗವಹಿಸುವಿಕೆಯನ್ನು ನಿರೀಕ್ಷಿಸುವುದು ಕಾರ್ಯಸಾಧ್ಯವಲ್ಲ.

ಬಿ. ವೆಬ್‌ಸೈಟ್‌ನ ಪ್ರಕಾರ, ಪೂರಕ(substantive), ಸಾಕ್ಷ್ಯಾಧಾರಿತ, ಮತ್ತು ಕಾರ್ಯವಿಧಾನದ ಕಾನೂನುಗಳನ್ನು ಒಳಗೊಂಡಂತೆ ಅಪರಾಧ ಕಾನೂನುಗಳಿಗೆ ಸುಧಾರಣೆಗಳನ್ನು ಶಿಫಾರಸ್ಸು ಮಾಡಲು ಸಮಿತಿ ಉದ್ದೇಶಿಸಿದೆ. ಈ ಪ್ರತಿಯೊಂದು ವರ್ಗವು ವಿಶಾಲವಾದ ಪರಿಧಿಯನ್ನು ಹೊಂದಿದೆ. ಉದಾಹರಣೆಗೆ, ಪೂರಕ(substantive) ಕಾನೂನುಗಳ ಪರಿಚ್ಛೇದವು ಅಪರಾಧಗಳನ್ನು ಹೇಗೆ ವ್ಯಾಖ್ಯಾನಿಸಬೇಕು ಎಂಬುದನ್ನು ಒಳಗೊಂಡಿದೆ, ಯಾವ ನಡವಳಿಕೆಯನ್ನು ಅಪರಾಧವೆಂದು ಪರಿಗಣಿಸಬೇಕು, ಅಪರಾಧ ಮಾಡುವ ಉದ್ದೇಶವಿಲ್ಲದೆ ಇರುವ ಯಾರನ್ನಾದರೂ ಯಾವ ಸಂಧರ್ಭದಲ್ಲಿ ಶಿಕ್ಷಿಸಬಹುದು, ಅಪರಾಧ ಮಾಡುವ ಪ್ರಯತ್ನಕ್ಕೆ ವ್ಯಕ್ತಿಯು ಯಾವ ಸಂದರ್ಭಗಳಲ್ಲಿ ಹೊಣೆಗಾರನಾಗಬಹುದು, ಯಾರಾದರೂ ತಪ್ಪಿತಸ್ಥರೆಂದು ಕಂಡುಬಂದಾಗ ರಾಜ್ಯವು ಹೇಗೆ ಪ್ರತಿಕ್ರಿಯಿಸಬೇಕು; ಅಪರಾಧದ ಎಲ್ಲಾ ಅಂಶಗಳು ಇದ್ದರೂ ಪ್ರತಿವಾದಿಯನ್ನು ಖುಲಾಸೆಗೊಳಿಸಿದಾಗ; ಭಾರತೀಯ ದಂಡ ಸಂಹಿತೆ 1860 (ಐಪಿಸಿ) ಯ ಅಡಿಯಲ್ಲಿ ಯಾವ ವ್ಯಾಖ್ಯಾನಗಳನ್ನು ಪರಿಷ್ಕರಿಸಬೇಕು; ಯಾವ ಸಂದರ್ಭಗಳಲ್ಲಿ ನಿಷ್ಕ್ರಿಯತೆಯನ್ನು ಶಿಕ್ಷಿಸಬಹುದಾಗಿದೆ, ಅಪರಾಧಗಳನ್ನು ಐಪಿಸಿ ಅಡಿಯಲ್ಲಿ ಹೇಗೆ ವರ್ಗೀಕರಿಸಬೇಕು ಮತ್ತು 'ಇತರ ಅಗತ್ಯವಿರುವ ಸುಧಾರಣೆಗಳು', ಮತ್ತು ಇದು ಆರು ಪ್ರಶ್ನಾವಳಿಗಳ ಸರಣಿಯ ಮೂಲಕ ಸಮಿತಿಯಿಂದ ಪರಿಶೀಲಿಸಲ್ಪಡುವ ಮೂರು ವರ್ಗಗಳ ಕಾನೂನುಗಳಲ್ಲಿ ಒಂದಾಗಿದೆ. ಆದರೂ, ಸಂಪೂರ್ಣ ಸಮಾಲೋಚನಾ ಪ್ರಕ್ರಿಯೆಯನ್ನು ಜುಲೈ 4, 2020 ರಿಂದ 9 ಅಕ್ಟೋಬರ್ 2020 ರವರೆಗೆ ಸುಮಾರು ಮೂರು ತಿಂಗಳಲ್ಲಿ ಮುಕ್ತಾಯಗೊಳಿಸಲಾಗುವುದು. ಆರು ಪ್ರಶ್ನಾವಳಿಗಳಿಗೆ ಪ್ರತಿಕ್ರಿಯೆಗಳನ್ನು ಸಲ್ಲಿಸಲು ಸಮಿತಿಯು ಅತಿಕ್ರಮಿಸುವ(overlapping) ಸಮಯ-ಚೌಕಟ್ಟುಗಳನ್ನು ನಿಗದಿಪಡಿಸಿದೆ, ಎಲ್ಲದರಲ್ಲೂ 300 ಕ್ಕೂ ಹೆಚ್ಚು ಪ್ರಶ್ನೆಗಳನ್ನು ಒಳಗೊಂಡಿರುವ ಸಾಧ್ಯತೆ ಇದೆ. ಇಷ್ಟು ಕಡಿಮೆ ಅವಧಿಯಲ್ಲಿ ಇಡೀ ಅಪರಾಧ ನ್ಯಾಯ ವ್ಯವಸ್ಥೆಯ ಕೂಲಂಕುಷ ಪರೀಕ್ಷೆಯನ್ನು ಪರಿಗಣಿಸುವುದು ವಾಸ್ತವಿಕ ಅಥವಾ ಅಪೇಕ್ಷಣೀಯವಲ್ಲ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಸಹ, ನಾಗರೀಕರು ಈ ಬದಲಾವಣೆಗಳ ವಿಸ್ತಾರವನ್ನು ಮೂರು ತಿಂಗಳಲ್ಲಿ ಅಳವಡಿಸಿಕೊಳ್ಳುವುದು ಕಷ್ಟಕರವಾಗಿರುತ್ತದೆ. ಸಾಂಕ್ರಾಮಿಕ ಸಮಯದಲ್ಲಿ, ಇದು ವಾಸ್ತವಿಕವಾಗಿ ಅಸಾಧ್ಯ, ಸಾಂಧರ್ಭಿಕವಾಗಿ, ಹೋಲಿಸಬಹುದಾದ ಪ್ರಮಾಣದ ಅಪರಾಧ ನ್ಯಾಯ ಸುಧಾರಣೆಗಳಿಗೆ ಸಂಬಂಧಿಸಿದ ಕೊನೆಯ ಸಮಿತಿ, ಮಳಿಮಠ್ ಸಮಿತಿ ತನ್ನ ವರದಿಯನ್ನು ತಯಾರಿಸಲು ಎರಡೂವರೆ ವರ್ಷಗಳನ್ನು ತೆಗೆದುಕೊಂಡಿತ್ತು.

### 3. ಪ್ರಶ್ನಾವಳಿಗಳು:

ಎ. ಪ್ರಶ್ನಾವಳಿಗಳು ವ್ಯಾಪಕವಾಗಿರುತ್ತದೆ. ಉದಾಹರಣೆಗೆ, ಆರು ಪ್ರಶ್ನಾವಳಿಗಳಲ್ಲಿ ಮೊದಲನೆಯದು 46 ಪ್ರಶ್ನೆಗಳನ್ನು ಒಳಗೊಂಡಿದೆ. ಇನ್ನೂ, ಪ್ರಶ್ನಾವಳಿಗಳಲ್ಲಿ ಗುರುತಿಸಲಾದ ಕ್ಷೇತ್ರಗಳಲ್ಲಿ ಸುಧಾರಣೆಯ ಅಗತ್ಯ ಅಥವಾ ಸಂದರ್ಭದ ಕುರಿತು ಸಮಿತಿಯು ಯಾವುದೇ ಮಾರ್ಗದರ್ಶನ ನೀಡಿಲ್ಲ. ಈ ಕಾನೂನಿನ ಕ್ಷೇತ್ರಗಳು ಸುಧಾರಣೆಯ ಅಗತ್ಯವಿರಬಹುದು ಎಂದು ಸಮಿತಿ ಯಾವ ಆಧಾರದ ಮೇಲೆ ನಿರ್ಧರಿಸಿದೆ?

ಬಿ. ಪ್ರಶ್ನಾವಳಿಗಳ ಪದಸಮುಚ್ಚಯವು ಸಮಂಜಸವಾಗಿರುವುದಿಲ್ಲ. ಅರ್ಥವು ಅಸ್ಪಷ್ಟ ಅಥವಾ ಗ್ರಹಿಸಲಾಗದಂತಿದೆ, ಪ್ರಶ್ನೆಗಳು ಕೆಲವೊಮ್ಮೆ ಆಧಾರ ರಹಿತ ಸಲಹೆಗಳನ್ನು ಮಾಡುತ್ತವೆ, ಕಾನೂನು ಶಿಕ್ಷಣದ ಪರಿಣಿತಿ ಹೊಂದಿರದವರಿಗೆ ಪ್ರಶ್ನಾವಳಿಗಳಲ್ಲಿ ಬಳಸಿರುವ ಭಾಷೆ ಖಂಡಿತವಾಗಿಯೂ ಗ್ರಹಿಸಲಾಗುವುದಿಲ್ಲ. ಈ ಅಂಶಗಳನ್ನು ವಿವರಿಸಲು ಮುಂದಿನ ಉದಾಹರಣೆಯು ಸಹಾಯ ಮಾಡುತ್ತದೆ.

## ಸಮಿತಿಯ ಪ್ರಶ್ನಾವಳಿಗಳಲ್ಲಿ ನ್ಯೂನ್ಯತೆಗಳ ವಿವರಣೆ: "ಕಟ್ಟು ನಿಟ್ಟಾದ ಹೊಣೆಗಾರಿಕೆ"

ಬಿಡುಗಡೆಯಾದ ಮೊದಲ ಪ್ರಶ್ನಾವಳಿಯಲ್ಲಿನ ಒಂದು ಪ್ರಶ್ನೆಯೆಂದರೆ, 'ಅಪರಾಧದ ವಸ್ತು ಮತ್ತು ಸ್ವರೂಪಕ್ಕೆ ಸಂಬಂಧಿಸಿದ ಯಾವ ತತ್ವಗಳು ಐಪಿಸಿಯೊಳಗೆ **ಕಟ್ಟು ನಿಟ್ಟಾದ ಹೊಣೆಗಾರಿಕೆ** ಅಪರಾಧಗಳನ್ನು ಪರಿಚಯಿಸಲು ಮಾರ್ಗದರ್ಶನ ನೀಡಬೇಕು?" ಕಾನೂನು ಭ್ರಾತೃತ್ವದ ಹೊರಗಿನ ಅನೇಕ ಜನರಿಗೆ "ಕಟ್ಟುನಿಟ್ಟಾದ ಹೊಣೆಗಾರಿಕೆ" ಒಳಗೊಳ್ಳುತ್ತದೆ ಕಲ್ಪನೆ ಏನು ಎಂದು ತಿಳಿದಿರುವುದಿಲ್ಲ. ಹಾಗು 'ಕಟ್ಟುನಿಟ್ಟಾದ ಹೊಣೆಗಾರಿಕೆಯನ್ನು' ಹೇಗೆ ಅರ್ಥೈಸಿಕೊಳ್ಳುತ್ತದೆ ಎಂಬುದರ ಬಗ್ಗೆ ಸಮಿತಿಯು ಯಾವುದೇ ಸೂಚನೆಯನ್ನು ನೀಡುವುದಿಲ್ಲ. ಈ ವಾಕ್ಯವನ್ನು ಸ್ವಲ್ಪ ವಿವರಿಸಲು; ಸಾಮಾನ್ಯವಾಗಿ, ಪ್ರತಿವಾದಿಯು ಆ ಕೃತ್ಯವನ್ನು ಉದ್ದೇಶಪೂರ್ವಕವಾಗಿ ನಿರ್ವಹಿಸಿದಾಗ ಅಥವಾ ನಿಷೇಧಿತ ಫಲಿತಾಂಶ ತರುವ ಉದ್ದೇಶದಿಂದ ಮಾತ್ರ ಒಂದು ಕೃತ್ಯವನ್ನು ಅಪರಾಧವೆಂದು ಪರಿಗಣಿಸಲಾಗುತ್ತದೆ. ವಿಶಾಲವಾಗಿ ಹೇಳುವುದಾದರೆ, ಕಟ್ಟುನಿಟ್ಟಾದ ಹೊಣೆಗಾರಿಕೆ ಅಪರಾಧಗಳು ಅಲ್ಲಿ ಕೃತ್ಯ ಎಸಗುವ ವ್ಯಕ್ತಿಯ ಉದ್ದೇಶವು ಅಪ್ರಸ್ತುವಾಗುತ್ತದೆ. ಉದಾಹರಣೆಗೆ ಚೆಕ್ ಬೌನ್ಸ್ ಆಗಿದ್ದರೆ, ಚೆಕ್ ಅನ್ನು ಅಮಾನಿಸುವ ಉದ್ದೇಶವಿಲ್ಲದ ಕಾರಣ, ಚೆಕ್ ನೀಡುವ ವ್ಯಕ್ತಿಯನ್ನು ಖುಲಾಸೆಗೊಳಿಸಲಾಗುವುದಿಲ್ಲ. ಅಂತೆಯೇ, ಅತಿಯಾದ ವೇಗದಲ್ಲಿ ವಾಹನ ಚಲಾಯಿಸುವ ವ್ಯಕ್ತಿಯನ್ನು ಹಿಡಿಯಲು ಕಾನೂನು ನಿರ್ಬಂಧಗಳಿಂದ ವಿನಾಯಿತಿ ನೀಡಲಾಗುವುದಿಲ್ಲ, ಏಕೆಂದರೆ ಅವಳು ನಿಯಮಿತ ವೇಗ ಮಿತಿಯನ್ನು ಮೀರಿ ವಾಹನ ಚಲಾಯಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಅದಾಗ್ಯೂ, 'ಕಟ್ಟು ನಿಟ್ಟಾದ ಹೊಣೆಗಾರಿಕೆ' ಎಂಬ ಈ ಪರಿಕಲ್ಪನೆಯ ಗಡಿರೇಖೆಗಳು ಯಾವುವು ಎಂಬುದರ ಕುರಿತು ಕಾನೂನು ಅಥವಾ ಪಾಂಡಿತ್ಯದಲ್ಲಿ ಯಾವುದೇ ಒಪ್ಪಂದವಿಲ್ಲ. ಒಂದು ವೇಳೆ ಅಪರಾಧ ಎಕ್ಸ್‌ನ್ನು ಪ್ರತಿವಾದಿಯು ಅಜಾಗರೂಕತೆ ಅಥವಾ ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲಿ,ಈ ಅಪರಾಧವನ್ನು 'ಕಟ್ಟು ನಿಟ್ಟಾದ ಹೊಣೆಗಾರಿಕೆಯನ್ನು' ಎಂದು ಕೆಲವರು ಹೇಳುತ್ತಾರೆ. ಇತರರು ಹೇಳುವಂತೆ ಕಾನೂನು 'ಕಟ್ಟು ನಿಟ್ಟಾದ ಹೊಣೆಗಾರಿಕೆಯನ್ನು' ಅದು ಆಪಾದಿತ ರೀತಿಯಲ್ಲಿ ವರ್ತಿಸದ ಪ್ರತಿವಾದಿಗೆ ಶಿಕ್ಷೆ ವಿಧಿಸುತ್ತದೆ. ಈ ಚಿಂತನೆ ಶಾಲೆಯ ಪ್ರಕಾರ, ಹಾಗೊಮ್ಮೆ , ನಿರ್ಲಕ್ಷ್ಯ ಪ್ರತಿವಾದಿಯು ದೂಷಿತ ರೀತಿಯಲ್ಲಿ ವರ್ತಿಸಿದಾಗ ಅಪರಾಧ ಎಕ್ಸ್ ಅನ್ನು 'ಕಟ್ಟು ನಿಟ್ಟಾದ ಹೊಣೆಗಾರಿಕೆ' ಎಂದು ಪರಿಗಣಿಸಲಾಗುವುದಿಲ್ಲ, ಆದ್ದರಿಂದ ನಾವು ಅಪರಾಧ ಪ್ರತಿಕ್ರಿಯೆಯನ್ನು ಕಟ್ಟು ನಿಟ್ಟಾದ ಹೊಣೆಗಾರಿಕೆ ಅಪರಾಧವೆಂದು ಉಲ್ಲೇಖಿಸಲು ಸಾಧ್ಯವಿಲ್ಲ. 'ಕಟ್ಟುನಿಟ್ಟಾದ ಹೊಣೆಗಾರಿಕೆಯನ್ನು' ಅವರು ಹೇಗೆ ಅರ್ಥಮಾಡಿಕೊಳ್ಳುತ್ತಾರೆಂದು ತಿಳಿಯದೆ ಈ ಹಂತದಲ್ಲಿ ಸಮಿತಿಯೊಂದಿಗೆ ತೊಡಗಿಸಿಕೊಳ್ಳುವುದು ಅಸಾಧ್ಯ. ಇದಲ್ಲದೆ,ಕೆಲವು ಸಂದರ್ಭಗಳಲ್ಲಿ ಕಟ್ಟು ನಿಟ್ಟಾದ ಹೊಣೆಗಾರಿಕೆ ಸ್ವೀಕಾರಾರ್ಹ ಎಂಬ ಊಹೆಯ ಮೇಲೆ ಪ್ರಶ್ನೆಯು ಮುಂದುವರಿಯುತ್ತದೆ ಮತ್ತು ನಂತರ ಅದು ಯಾವಾಗ/ ಏಕೆ ಇರಬೇಕು ಎಂಬುದರ ಕುರಿತು ಪ್ರತಿಕ್ರಿಯೆ ಕೇಳುತ್ತದೆ. ಕಟ್ಟು ನಿಟ್ಟಾದ ಹೊಣೆಗಾರಿಕೆ ಅಪರಾಧದ ಗಂಭೀರ ಪರಿಣಾಮಗಳನ್ನು ಗಮನಿಸಿದರೆ – ನೀವು ಯಾವುದೇ ತಪ್ಪು ಮಾಡುವ ಉದ್ದೇಶವಿಲ್ಲದಿದ್ದರೂ ಸಹ ತಪ್ಪಿತಸ್ಥರೆಂದು ಪರಿಗಣಿಸುವುದು – ಇದು ಆಳವಾದ ಕಾಳಜಿಯ ವಿಷಯವಾಗಿದೆ. ಐಪಿಸಿಯಲ್ಲಿ ಕಟ್ಟು ನಿಟ್ಟಾದ ಹೊಣೆಗಾರಿಕೆ ಅಪರಾಧಗಳ ಅನುಪಸ್ಥಿತಿಯನ್ನು ಸಮಸ್ಯೆ ಪ್ರದೇಶವೆಂದು ಗುರುತಿಸಲು ಯಾವ ಸಂಶೋಧನೆ ಕೈಗೊಳ್ಳಲಾಗಿದೆ ಎಂಬುದನ್ನು ತೋರಿಸಲು ಸಮಿತಿಯ ವೆಬ್‌ಸೈಟ್‌ನಲ್ಲಿ ಯಾವುದೇ ಮಾಹಿತಿ ಲಭ್ಯವಿಲ್ಲ.

ಸಿ. ಪ್ರಶ್ನಾವಳಿಗಳನ್ನು ಸರಣಿ ಕ್ರಮದಲ್ಲಿ ಬಿಡುಗಡೆ ಮಾಡಲು ಸಮಿತಿ ಯೋಜಿಸಿದೆ, ಮೊದಲು ವಸ್ತುವಿಷಯದೊಂದಿಗೆ ವ್ಯವಹರಿಸುತ್ತದೆ, ನಂತರ; ಕಾರ್ಯವಿಧಾನದೊಂದಿಗೆ ಮತ್ತು ಅಂತಿಮವಾಗಿ ಸಾಕ್ಷ್ಯಗಳೊಂದಿಗೆ. ಕಾನೂನಿನ ಈ ಕ್ಷೇತ್ರಗಳನ್ನು ಅನುಕ್ರಮವಾಗಿ ವ್ಯವಹರಿಸುವುದು ವಾಸ್ತವಿಕವಲ್ಲ ಏಕೆಂದರೆ ಅವೆಲ್ಲವೂ ಕಾರ್ಯಾಚರಣೆಯಲ್ಲಿ ಒಟ್ಟಿಗೆ ಜೋಡಿಸಲ್ಪಟ್ಟಿವೆ. ವಿಶಾಲವಾಗಿ ಹೇಳುವುದಾದರೆ, ಅಪರಾಧ ಏನೆಂದು ಪೂರಕ (ಸಬ್‌ಸ್ಟ್ಯಾಂಟಿವ್) ಕಾನೂನು ವಿವರಿಸುತ್ತದೆ. ಕಾರ್ಯವಿಧಾನವು ಮತ್ತು ಸಾಕ್ಷಾಧಾರ ಕಾನೂನುಗಳು, ನ್ಯಾಯಾಲಯದಲ್ಲಿ ಅಪರಾಧವನ್ನು ಹೇಗೆ ಸಾಬೀತುಪಡಿಸುತ್ತದೆ ಎಂಬುದನ್ನು ನಿರೂಪಿಸುತ್ತದೆ. ಮಧ್ಯಸ್ಥಗಾರರು ಕೆಲವೊಮ್ಮೆ ಹೊಸ ಅಪರಾಧಗಳ ಸೇರ್ಪಡೆ ಅಥವಾ ಅಸ್ತಿತ್ವದಲ್ಲಿರುವ ಅಪರಾಧಗಳ ಮಾರ್ಪಾಡುಗಳನ್ನುಮಾಡಬಹುದು.ಆದರೆ, ಕಾರ್ಯವಿಧಾನದ ಮತ್ತು ಸಾಕ್ಷಾಧಾರ ಸುರಕ್ಷತೆಗಳನ್ನು ಗೌರವಿಸುವ ಷರತ್ತಿನ ಮೇಲೆ ಮಾತ್ರ ನ್ಯಾಯಬದ್ಧ ವಿಚಾರಣೆಯನ್ನು ನಡೆಸಬಹುದು. ಪರಸ್ಪರ ಪ್ರತ್ಯೇಕವಾಗಿ ವಸ್ತು, ಕಾರ್ಯವಿಧಾನ ಮತ್ತು ಪುರಾವೆಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡಲು ಸಾಧ್ಯವಿಲ್ಲ.

4. ಕಾರ್ಯವಿಧಾನ:

ಎ. ಸಮಿತಿಯ ಬಗ್ಗೆ ಮಾಹಿತಿಯನ್ನು ಮುಖ್ಯವಾಗಿ ಅದರ ವೆಬ್‌ಸೈಟ್‌ನಲ್ಲಿ ಜಾಹೀರು ಮಾಡಲಾಗಿದೆ. ಸಮಿತಿಯ ಸಮಾಲೋಚನೆಗಳಲ್ಲಿ ಭಾಗವಹಿಸುವಿಕೆಯು ಈ ಆನ್‌ಲೈನ್ ಸಂಪನ್ಮೂಲಗಳನ್ನು ಪ್ರವೇಶಿಸುವುದರ ಮೇಲೆ ಅವಲಂಬಿತವಾಗಿರುತ್ತದೆ, ಅವುಗಳ ಮೂಲಕ ಹೇಗೆ ನ್ಯಾವಿಗೇಟ್ ಮಾಡಬೇಕೆಂದು ತಿಳಿಯುವುದು ಮತ್ತು ವೆಬ್‌ಸೈಟ್ ಕಾರ್ಯನಿರ್ವಹಿಸುವ ಭಾಷೆಯನ್ನು ಗ್ರಹಿಸುವುದು (ಇಂಗ್ಲಿಷ್), ಈ ಪ್ರಕ್ರಿಯೆಯು ಬಹುಭಾಷಾ ಬಳಕೆಯ ಮತ್ತು ಅತ್ಯಂತ ನಿಧಾನ ಗತಿಯ ಅಂತರ್ಜಾಲ ಬಳಕೆ ಇರುವ ದೇಶದಲ್ಲಿ ಎಂತಹ ಅತ್ಯುತ್ತಮ ಸಮಯದಲ್ಲೂ ಸಾಮಾನ್ಯರಿಂದ ಹೊರಗಿಡುವ ಕಾರ್ಯವಿಧಾನಗಳಾಗಿವೆ. ಬಹುಶ: ಕಟು ವಾಸ್ತವ ಪರಿಸ್ಥಿತಿಯ ಚಿತ್ರಣವೇನೆಂದರೆ, ಸಾಂಕ್ರಾಮಿಕ ರೋಗದ ತೀವ್ರತೆಯ ಸಮಯದಲ್ಲಿ ಆನ್‌ಲೈನ್ ತರಗತಿಗಳನ್ನು ಪ್ರವೇಶಿಸಲು ಸಾಧ್ಯವಾಗದ ಭಾರತೀಯ ವಿದ್ಯಾರ್ಥಿಗಳು ಆತ್ಮಹತ್ಯೆಯಿಂದ ಸಾವನ್ನಪ್ಪುತ್ತಿದ್ದಾರೆ ಎಂಬ ವರದಿ.

## 5. ಸಂಯೋಜನೆ

ಎ. ಸಮಿತಿಯು ಕೇವಲ ಐದು ಸದಸ್ಯರನ್ನು ಮಾತ್ರ ಒಳಗೊಂಡಿದೆ, ಇವರೆಲ್ಲರೂ ಇತರ ಪೂರ್ಣ ಸಮಯದ ಉದ್ಯೋಗಗಳನ್ನು ಹೊಂದಿದ್ದಾರೆ. ಸಮಿತಿಯು ಕಾರ್ಯಾಚರಣೆಯ ಕಾಲಮಿತಿಗಳು ಎಷ್ಟು ಕಿರಿದಾಗಿವೆ ಎನ್ನುವುದನ್ನು ಗಮನಿಸಿದರೆ, ಪೂರ್ಣ ಸಮಯದ ಸದಸ್ಯರಿಲ್ಲದೆ ಸಮಿತಿಯು ತನ್ನ ಕಾರ್ಯಗಳನ್ನು ಸಮರ್ಥವಾಗಿ ಮತ್ತು ಪ್ರಜಾಪ್ರಭುತ್ವವಾಗಿ ನಿರ್ವಹಿಸಲು ಸಾಧ್ಯವಿದೆ ಎಂದು ನಾವು ಭಾವಿಸುವುದಿಲ್ಲ.

ಬಿ. ಸಮಿತಿಯಲ್ಲಿ ಜನಾಂಗೀಯ, ಲೈಂಗಿಕ, ಲಿಂಗ, ಧಾರ್ಮಿಕ ಅಥವಾ ಜಾತಿ ಅಲ್ಪಸಂಖ್ಯಾತರಿಂದ ಯಾವುದೇ ಪ್ರಾತಿನಿಧ್ಯವಿರುವುದಿಲ್ಲ. ನಾವು ತಿಳಿದಂತೆ, ಕಾರ್ಮಿಕ ವರ್ಗ ಅಥವಾ ಅಂಗವಿಕಲ ಸಮುದಾಯಗಳಿಂದ ಯಾವುದೇ ಪ್ರಾತಿನಿಧ್ಯವಿಲ್ಲ. ಸಂಘರ್ಷದಿಂದ ತುಂಬಿರುವ ಪ್ರದೇಶಗಳನ್ನು ಬಿಡಿ, ಉತ್ತರ ಭಾರತದಲ್ಲಿ ಸೀಮಿತ ಭೌಗೋಳಿಕ ಪ್ರದೇಶದ ಹೊರಗಿನಿಂದೆ ಸಮಿತಿಯಲ್ಲಿ ಯಾವುದೇ ಸದಸ್ಯರು ಇರುವುದಿಲ್ಲ. ಮೇಲೆ ಹೇಳಲಾದ ಯಾವುದೆ ಗುಂಪುಗಳೊಂದಿಗೆ ಕೆಲಸ ಮಾಡುವ ನಾಗರಿಕ ಸಮಾಜ ಸಂಸ್ಥೆಗಳಿಂದ ಯಾವುದೇ ಪ್ರಾತಿನಿಧ್ಯವಿರುವುದಿಲ್ಲ, ಇವರಲ್ಲಿ ಹೆಚ್ಚಿನವರು ಆಗಾಗ್ಗೆ

ಅತಿಯಾದ ಪೋಲೀಸ್ ನಿಗಾದಲ್ಲಿವವರು ಮತ್ತು ಅಸುರಕ್ಷಿತರು. ಸುಧಾರಣಾ ಪ್ರಕ್ರಿಯೆಯು ಅರ್ಥಪೂರ್ಣ ಮತ್ತು ಪರಿಣಾಮಕಾರಿ ಎಂದು ಖಚಿತಪಡಿಸಿಕೊಳ್ಳಲು, ಪ್ರಜಾಪ್ರಭುತ್ವದ ನ್ಯಾಯಸಮ್ಮತೆಗಾಗಿ ಅಪರಾಧ ಕಾನೂನಿಗೆ ಹೆಚ್ಚು ಒಳಪಟ್ಟಿರುವವರು ಈ ಪ್ರಕ್ರಿಯೆಯ ಭಾಗವಾಗಬೇಕು. ಉದಾಹರಣೆಗೆ, "ಗೌರವ ಹತ್ಯೆಯನ್ನು" ಐಪಿಸಿ ಅಡಿಯಲ್ಲಿ ನಿರ್ದಿಷ್ಟ ಅಪರಾಧವನ್ನಾಗಿ ಮಾಡಬೇಕೇ ಮತ್ತು ಅದನ್ನು ಹೇಗೆ ಶಿಕ್ಷಿಸಬೇಕು ಎಂಬುದರ ಕುರಿತು ಸಮಿತಿಯು ಅಭಿಪ್ರಾಯಗಳನ್ನು ಕೋರಿದೆ. ಜಾತಿ, ಧರ್ಮ ಅಥವಾ ಲಿಂಗವನ್ನು ಆಧರಿಸಿ ಅಧಿಕಾರ ರಚನೆಗಳನ್ನು ಎತ್ತಿಹಿಡಿಯಲು ಸಾಮಾನ್ಯವಾಗಿ ಗೌರವ ಹತ್ಯೆಗಳನ್ನು ಮಾಡಲಾಗುತ್ತದೆ. ಈ ಸಮುದಾಯದ ಮಾತನಾಡಬಲ್ಲ ಸದಸ್ಯರನ್ನು ಸೇರಿಸದೆ ಈ ವಿಷಯದಲ್ಲಿ ಸುಧಾರಣೆಯನ್ನು ಪರಿಚಯಿಸುವುದು ಅನಪೇಕ್ಷಿತವಾಗಿದೆ.

ಸಿ. ಕಾನೂನಿನ ವಿವಾದಾತ್ಮಕ ಕ್ಷೇತ್ರಗಳನ್ನು ಪರಿಶೀಲಿಸುವ ಮತ್ತು ಸಾರ್ವಜನಿಕರೊಂದಿಗೆ ವ್ಯಾಪಕ ಸಮಾಲೋಚನೆಯ ನಂತರ ಸುಧಾರಣೆಗಳನ್ನು ಶಿಫಾರಸ್ಸು ಮಾಡುವ ನಿಖರ ಉದ್ದೇಶಕ್ಕಾಗಿ ಭಾರತದ ಕಾನೂನು ಆಯೋಗ ಅಸ್ತಿತ್ವದಲ್ಲಿದೆ, ಕಾನೂನು ಆಯೋಗದ ಬಗ್ಗೆ ಯಾವುದೇ ಉಲ್ಲೇಖವಿಲ್ಲದೆ ಈ ಪ್ರಮಾಣದ ಮತ್ತು ಪ್ರಾಮುಖ್ಯತೆಯ ಕಾರ್ಯಕ್ಕಾಗಿ ಬಾಹ್ಯ ಸಮಿತಿಯನ್ನು ಒಪ್ಪಿಸಲು ಯಾವುದೇ ಸಮರ್ಥನೆ ಇಲ್ಲ.

ಈ ಮೇಲೆ ಮಂಡಿಸಲಾದ ಅಭಿಪ್ರಾಯ, ಟೀಕೆಗಳ ಬೆಳಕಿನಲ್ಲಿ, ಸಮಿತಿಯು ತಕ್ಷಣದ ಪರಿಣಾಮದೊಂದಿಗೆ ಕಾರ್ಯನಿರ್ವಹಿಸುವುದನ್ನು ಸ್ಥಗಿತಗೊಳಿಸುವುದು ಅತ್ಯಗತ್ಯ. ಕ್ರಿಮಿನಲ್ ಕಾನೂನು ಸುಧಾರಣೆಗಳನ್ನು ಪರಿಚಯಿಸಬೇಕಾದರೆ, ದೇಶದಲ್ಲಿ ಕೋವಿಡ್ – 19 ಸಾಂಕ್ರಾಮಿಕದ ಹಾನಿಕಾರಕ ಪರಿಣಾಮಗಳು ತಗ್ಗಿದನಂತರ, ಸಮರ್ಪಕ ಸಮಾಲೋಚನೆ, ಸುಸಂಬದ್ಧ ವಿಧಾನಗಳು, ಅಂತರ್ಗತ ಮತ್ತು ಪಾರದರ್ಶಕ ಕಾರ್ಯವಿಧಾನಗಳನ್ನು ಅನುಸರಿಸಿ, ಪ್ರತಿನಿಧಿ ಸಮಿತಿಯಿಂದ ಮಾಡಿಸಬೇಕು.